# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 215
2. ಮಾನ್ಯ ಸದಸ್ಯರ ಹೆಸರು : ಶ್ರೀ. ಕಾಂತರಾಜ್ (ಬಿಎಂಎಲ್)
3. ಉತ್ತರಿಸಬೇಕಾದ ದಿನಾಂಕ : 14.12.2021
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕೃಷಿ ಉತ್ಪನ್ನ ಮಾರುಕಟ್ಟೆ ಇಲಾಖೆಯಲ್ಲಿ ಹಾಲಿ ಜಾರಿಯಲ್ಲಿರುವ ನಿಧಿಗಳಾವುವು; ಇವುಗಳಿಗೆ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ; ಹಾಲಿ ಲಭ್ಯವಿರುವ ಹಣವೆಷ್ಟು; (ವಿವರವಾದ ಮಾಹಿತಿ ನೀಡುವುದು)</td><td>ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯಲ್ಲಿ ಹಾಲಿ (1) ಆವರ್ತನಿಧಿ (2) ಮಾರುಕಟ್ಟೆ ಸುಧಾರಣೆ ನಿಧಿ ಮತ್ತು (3) ಕೃಷಿ ವಿಶ್ವವಿದ್ಯಾಲಯ ನಿಧಿಗಳು ಜಾರಿಯಲ್ಲಿರುತ್ತವೆ. ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ ಸಂ</th><th>ಸ್ಥಾಪಿಸಲಾದ ನಿಧಿಯ ಹೆಸರು</th><th>ಉದ್ದೇಶ</th></tr>
<tr><td>1</td><td>ಆವರ್ತನಿಧಿ</td><td>1999–2000 ರಿಂದ ಇದುವರೆಗೆ ಆವರ್ತ ನಿಧಿಗೆ ರಾಜ್ಯ ಸರ್ಕಾರದಿಂದ ರೂ.1,024.41 ಕೋಟಿಗಳು ಬಿಡುಗಡೆಯಾಗಿರುತ್ತದೆ.<br>ಪ್ರಸ್ತುತ ಆವರ್ತ ನಿಧಿ ಖಾತೆಯಲ್ಲಿ ನವೆಂಬರ್–2021ರ ಅಂತ್ಯಕ್ಕೆ ಅಂದಾಜು ರೂ.218.83 ಕೋಟಿ ಲಭ್ಯವಿರುತ್ತದೆ.</td></tr>
<tr><td>2</td><td>ಮಾರುಕಟ್ಟೆ ಸುಧಾರಣೆ ನಿಧಿ</td><td>ಈ ನಿಧಿಗೆ ಸರ್ಕಾರದಿಂದ ಯಾವುದೆ ಅನುದಾನ ಇರುವುದಿಲ್ಲ. ಸರ್ಕಾರದ ಆದೇಶದನ್ವಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕ್ರೋಢೀಕೃತವಾಗುವ ಮಾರುಕಟ್ಟೆ ಶುಲ್ಕ ಹಾಗೂ ಲೈಸೆನ್ಸ್ ಶುಲ್ಕದ ಮೇಲೆ 10 ಪೈಸೆಯಷ್ಟು ವಂತಿಕೆಯನ್ನು ಮಂಡಳಿಗೆ ಪಾವತಿಸಲಾಗುತ್ತದೆ.<br>ಪ್ರಸ್ತುತ ಮಾರುಕಟ್ಟೆ ಸುಧಾರಣೆ ನಿಧಿ ಖಾತೆಯಲ್ಲಿ ನವೆಂಬರ್–2021ರ ಅಂತ್ಯಕ್ಕೆ ಅಂದಾಜು ರೂ.28.32 ಕೋಟಿ ಲಭ್ಯವಿರುತ್ತದೆ.</td></tr>
<tr><td>3</td><td>ಕೃಷಿ ವಿಶ್ವವಿದ್ಯಾಲಯ ನಿಧಿ</td><td>ಈ ನಿಧಿಗೆ ಸರ್ಕಾರದಿಂದ ಯಾವುದೆ ಅನುದಾನ ಇರುವುದಿಲ್ಲ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕ್ರೋಢೀಕೃತವಾಗುವ ಮಾರುಕಟ್ಟೆ ಶುಲ್ಕ ಹಾಗೂ ಲೈಸೆನ್ಸ್ ಶುಲ್ಕದ ಮೇಲೆ ಶೇ.1 ರಷ್ಟು ವಂತಿಕೆಯನ್ನು ಮಂಡಳಿಗೆ ಪಾವತಿಸಲಾಗುತ್ತದೆ.<br>ಪ್ರಸ್ತುತ ಕೃಷಿ ವಿಶ್ವವಿದ್ಯಾಲಯ ನಿಧಿ ಖಾತೆಯಲ್ಲಿ ನವೆಂಬರ್–2021ರ ಅಂತ್ಯಕ್ಕೆ ಅಂದಾಜು ರೂ.47.07 ಕೋಟಿ ಲಭ್ಯವಿರುತ್ತದೆ.</td></tr>
</table>
</td></tr>
<tr><td>ಆ</td><td>ಆವರ್ತ ನಿಧಿ ಎಂದರೇನು; ಈ ನಿಧಿಯಲ್ಲಿ ಇಲ್ಲಿಯವರೆಗೆ ಯಾವ ಯಾವ ಸಂಸ್ಥೆಗಳಿಗೆ ಹಣವನ್ನು ನೀಡಲಾಗಿದೆ; ಹಣವನ್ನು ನೀಡಲು ಇರುವ ಮಾನದಂಡಗಳೇನು; (ಜಿಲ್ಲಾವಾರು ವಿವರವಾದ ಮಾಹಿತಿ ನೀಡುವುದು).</td><td>ಆವರ್ತ ನಿಧಿ ಎಂದರೆ:– ರಾಜ್ಯದಲ್ಲಿ ಕೃಷಿ ಕ್ಷೇತ್ರವನ್ನು ಸಮರ್ಥನೀಯವಾಗಿ ಬಲಪಡಿಸುವ ಹಾಗೂ ಕೃಷಿ ಕ್ಷೇತ್ರದಲ್ಲಿ ಸ್ಥಿರತೆಯನ್ನು ಕಾಪಾಡುವ ದೃಷ್ಟಿಯಿಂದ ಮತ್ತು ರಾಜ್ಯದ ರೈತರು ಕೃಷಿ ಉತ್ಪನ್ನಗಳ ಬೆಲೆ ಕುಸಿತ ಸಂದರ್ಭದಲ್ಲಿ ಹತಾಶರಾಗಿ ತಮ್ಮ ಕೃಷಿ/ತೋಟಗಾರಿಕಾ ಉತ್ಪನ್ನಗಳನ್ನು ಮಾರಾಟ ಮಾಡುವುದನ್ನು ತಡೆಯುವ ದೃಷ್ಟಿಯಿಂದ ಕನಿಷ್ಠ ಬೆಂಬಲ ಬೆಲೆ ಯೋಜನೆಯನ್ನು ಜಾರಿಗೊಳಿಸಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಸ್ಥಾಪಿಸಲಾಗಿರುವ ನಿಧಿಗೆ ಆವರ್ತ ನಿಧಿ ಎಂದು ಹೆಸರು.<br>ಇಲ್ಲಿಯವರೆಗೆ ಆವರ್ತ ನಿಧಿಯಿಂದ ವಿವಿಧ ಜಿಲ್ಲೆಗಳ ಖರೀದಿ ಏಜೆನ್ಸಿಗಳಿಗೆ ಹಣ ಬಿಡುಗಡೆ ಮಾಡಲಾಗಿರುವ ವಿವರವನ್ನು ಅನುಬಂಧ–1ರಲ್ಲಿ ಒದಗಿಸಿದೆ.<br>ಆವರ್ತ ನಿಧಿಯಿಂದ ವಿವಿಧ ಖರೀದಿ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡಲು ಇರುವ ಮಾರ್ಗಸೂಚಿಗಳ ವಿವರವನ್ನು ಅನುಬಂಧ–2ರಲ್ಲಿ ಒದಗಿಸಿದೆ.</td></tr>
</table>

| | | |
|---|---|---|
| ಇ | ಆವರ್ತ ನಿಧಿಯಲ್ಲಿ ಹಣವನ್ನು ಬಾಕಿ ಉಳಿಸಿಕೊಂಡಿರುವ ಸಂಸ್ಥೆಗಳಾವುವು; ಬಾಕಿ ಉಳಿಸಿಕೊಳ್ಳಲು ಕಾರಣಗಳೇನು; ಇವುಗಳಿಂದ ಯಾವಾಗ ಹಣವನ್ನು ಪಡೆದುಕೊಳ್ಳಲಾಗುವುದು; (ಜಿಲ್ಲಾವಾರು ಮಾಹಿತಿ ನೀಡುವುದು) | ಆವರ್ತ ನಿಧಿಯ ಹಣವನ್ನು ಬಾಕಿ ಉಳಿಸಿಕೊಂಡಿರುವ ಸಂಸ್ಥೆಗಳ ವಿವರವನ್ನು **ಅನುಬಂಧ-1**ರಲ್ಲಿ ಒದಗಿಸಿದೆ.<br><br>ಕೃಷಿ ಉತ್ಪನ್ನಗಳ ಬೆಲೆ ಕುಸಿತದ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಅನುಮೋದನೆ ಮೇರೆಗೆ ಬೆಂಬಲ ಬೆಲೆ ಯೋಜನೆಯಡಿ ಖರೀದಿ ಪ್ರಕ್ರಿಯೆ ನಡೆಸಲಾಗುತ್ತದೆ. ಈ ರೀತಿ ಖರೀದಿ ಪ್ರಕ್ರಿಯೆ ಕೈಗೊಳ್ಳಲು ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ಬೆಲೆ ಸ್ಥಿರೀಕರಣ ಸಚಿವ ಸಂಪುಟದ ಉಪ ಸಮಿತಿಯ ಅನುಮೋದನೆಯ ಮೇರೆಗೆ ರಾಜ್ಯ ಸರ್ಕಾರ ನೇಮಿಸಿದ ಖರೀದಿ ಏಜೆನ್ಸಿಗಳಿಗೆ ಮುಂಗಡ ರೂಪದಲ್ಲಿ ಆವರ್ತನಿಧಿಯಿಂದ ಹಣ ಬಿಡುಗಡೆ ಮಾಡಲಾಗುವುದು. ಈ ರೀತಿ ಖರೀದಿ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾದ ಮುಂಗಡ ಹಣವನ್ನು ನಂತರ ಆವರ್ತನಿಧಿಗೆ ಮರುಪಾವತಿಸಲಾಗುತ್ತದೆ. ಸದರಿ ಮೊತ್ತವು ಆವರ್ತ ನಿಧಿಯಿಂದ ಖರೀದಿ ಸಂಸ್ಥೆಗಳಿಗೆ ಮತ್ತು ಖರೀದಿ ಸಂಸ್ಥೆಗಳಿಂದ ಆವರ್ತ ನಿಧಿಗೆ ಪುನರ್ ಭರಣವಾಗುತ್ತದೆ. ಇದು ನಿರಂತರ ಪ್ರಕ್ರಿಯೆಯಾಗಿರುತ್ತದೆ. |
| ಈ | ಕಳೆದ 3 ವರ್ಷಗಳಿಂದ ಕೊಯಿಲ್ಲೋತ್ತರ ಸಂಸ್ಕರಣೆ ಮತ್ತು ಸಾಗಾಟ ಹಾಗೂ ಇತರೆಗಳಿಗಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ; ಯಾವ ಯಾವ ಸಂಸ್ಥೆಗಳಿಗೆ ಎಷ್ಟು ಹಣವನ್ನು ನೀಡಲಾಗಿದೆ; (ವಿವರವಾಗಿ ವರ್ಷಾವಾರು ಮಾಹಿತಿ ನೀಡುವುದು) | ಕೊಯ್ಲುನಂತರ ಸಂಸ್ಕರಣೆ ಮತ್ತು ಸಾಗಾಟಕ್ಕಾಗಿ ಖರ್ಚು ಮಾಡಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ.<br><br>ಆದರೆ, ಮಾರುಕಟ್ಟೆ ಸುಧಾರಣೆ ನಿಧಿಯಿಂದ, ಕೃಷಿ ಉತ್ಪನ್ನಗಳ ವರ್ಗೀಕರಣ, ಗುಣಮಟ್ಟ ವಿಶ್ಲೇಷಣೆ, ಆಯ್ದ ಕೃಷಿ ಉತ್ಪನ್ನ ಮಾರಾಟದ ಅವಶ್ಯಕ ಸೌಲಭ್ಯಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿನ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ನೀಡುವ ಕಾರ್ಯಕ್ರಮಗಳಿಗೆ ವಿನಿಯೋಗಿಸಲು ಅವಕಾಶ ಇರುತ್ತದೆ.<br><br>ಕಳೆದ 3 ವರ್ಷಗಳಲ್ಲಿ ವಿನಿಯೋಗಿಸಲಾದ ವರ್ಷವಾರು ಮೊತ್ತದ ವಿವರವನ್ನು ಅನುಬಂಧ-3 ರಲ್ಲಿ ಒದಗಿಸಿದೆ. |
| ಉ) | ಸದರಿ ಸಂಸ್ಥೆಗಳ ಜೊತೆ ಇಲಾಖೆ ಅಥವಾ ಮಂಡಳಿ ಮಾಡಿಕೊಂಡಿರುವ ಒಡಂಬಡಿಕೆಯ ಪ್ರತಿಯನ್ನು ನೀಡುವುದು; | ಸಂಸ್ಥೆಗಳ ಜೊತೆ ಇಲಾಖೆ ಅಥವಾ ಮಂಡಳಿ ಮಾಡಿಕೊಂಡಿರುವ ಒಡಂಬಡಿಕೆಯ ಪ್ರತಿಯನ್ನು ಅನುಂಬಂಧ-4ರಲ್ಲಿ ಒದಗಿಸಿದೆ. |
| ಊ) | ಕೋವಿಡ್ ವರ್ಷದಲ್ಲೂ ಕೂಡಾ ವಿಮಾನದಲ್ಲಿ ಸಾಕಾಣಿ ಮತ್ತು ಸಂಸ್ಕರಣಾ ಹಾಗೂ ಇತರೆಗಳಿಗಾಗಿ 89 ಲಕ್ಷಗಳನ್ನು ಖರ್ಚು ಮಾಡಿರುವ ಬಗ್ಗೆ ವಿವರವಾದ ಮಾಹಿತಿ ನೀಡುವುದು? | ಉದ್ಭವಿಸುವುದಿಲ್ಲ. |

ಸಿಒ 307 ಎಂಆರ್‌ಇ 2021

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು